Rega No M 1229 | 43rd Year | Sri 'Satyavadi' Mysore | 3—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಂಸ್ಥೇದಾರ್ ಎ. ಏ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಅಕ್ಕಿ ಆಮದು

ನವದೆಹಲಿ 7— ಭಾರತವು 57–58 ರಲ್ಲಿ ಸೋವಿಯತ್ ರಷ್ಯಾದಿಂದ 32800 ಟನ್ನುಗಳಷ್ಟು ಬರ್ಮಾ ಅಕ್ಕಿಯನ್ನು ಆಮದು ಮಾಡಿಕೊಂಡಿತು ಎಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

ಅಕ್ಕಿ ಪೂರೈಕೆ

ನವದೆಹಲಿ 7— ಅಕ್ಕಿಗೆ ಬದಲು ಜೋಳಕ್ಕೆ ಕೊಡವ ಆಧಾರದ ಮೇಲೆ ನೆಲ್ಲೂರಿನ ಹಸಿ ಅಕ್ಕಿಯನ್ನು ಪೂರೈಸಲು ಮದರಾಸು ಸರಕಾರದವರು ಕೇಂದ್ರ ಸರಕಾರವನ್ನು ಕೇಳಿರುವರೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

ಕನ್ನಡ ಸಾಹಿತ್ಯ ಸಮ್ಮೇಳನ

ಮೈಸೂರು ರಾಜ್ಯದ ಉತ್ತರದಲ್ಲಿರುವ ಇದುವರೆಗೂ ಸಾಹಿತ್ಯ ಸಮ್ಮೇಳನ ನಡೆಯದೇ ಇರುವ ಬೀದರ ಜಿಲ್ಲೆಯ ಔರಾದ ಪಟ್ಟಣದಲ್ಲಿ ಡಿಸೆಂಬರ 12, 13 ರಿಂದ 41 ನೇ ಸಾಹಿತ್ಯ ಸಮ್ಮೇಳನವು ನಡೆಯುತ್ತದೆ: ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ

ಕೆಸಾರ ಸಭಾ ಅಧ್ಯಕ್ಷತೆ

ನವದೆಹಲಿ 7— ಅಖಿಲ ಭಾರತ ಕಿಸಾನ್ ಸಭಾ ಕಮ್ಯೂನಿಸ್ಟ್ ನಾಯಕ ಎನ್. ಗೋಪಾಲ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಹೊರದೂಡಿದರು

ಡಾರ್ಟ್‌ಮಂಡ್ 5— ಎಶ್ವ ಟೀಬಲ್ ಟೆನ್ನೀಸ್ ಪಂಥದಲ್ಲಿ ವೆಸ್ಟ್ ಫಲಕ್ ಹಾಲ್ ಸ್ಟೇಡಿಯಂನಲ್ಲಿ ಹಂಗೇರಿ ಮತ್ತು ಜಪಾನ್ ನಡುವಿನ ಸ್ಪರ್ಧಿಗಳಿಗೆ ಸೆಮಿ ಫೈನಲ್ಲು ನಡೆಯುತ್ತಿದ್ದಾಗ ಕೂಗಿಕೊಳ್ಳುತ್ತಿದ್ದ ಒಬ್ಬ ಭಾರತೀಯನನ್ನು ಹಿಡಿದು ಹೊರಗೆಹಾಕಲಾಯಿತು.

ಹೊಸವರ್ಷದ ಶುಭಾಶಯಗಳು

ಶ್ರೀ ವಿಕಾರಿ ಸಂವತ್ಸರದಲ್ಲಿ ಭಗವಂತನು ಸಕಲರಿಗೂ ಸಕಲ ಸನ್ಮಂಗಳಗಳನ್ನು ದಯಪಾಲಿಸಲಿ

ವಿವಿಧ ವಿಷಯಗಳು

ಮಾಜಿ ಕಾಂಗ್ರೆಸ್ಸು ಅಧ್ಯಕ್ಷ ಧೇಬರರು ಮೈಸೂರು ರಾಜ್ಯದಲ್ಲಿ ಮೇ 21 ರಿಂದ 1 ವಾರ ಪ್ರವಾಸಮಾಡುತ್ತಾರೆ.

ಎಫ್ ಸಿ ರಚನಾತ್ಮಕ ಕಾರ್ಯ ಸಮಿತಿಗೆ ಮೈಸೂರಿನ ಮಾಜಿ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಅಧ್ಯಕ್ಷರಾಗುವರು.

ಕೈರೊ 7— ಕಿರ್ಬುಕ್ ಎಣ್ಣೆ ನಗರದ ಒಂದು ಭಾಗ ವಶಪಡಿಸಿಕೊಂಡಿರುವ ಇಂಗ್ಲೆಂಡ್ ಫ್ರೆಂಚ್ ಪಡೆಗಳು ಉತ್ತರ ಇಂಡೋನೇಷಿಯಾದಲ್ಲಿ ಭೀಕರ ಕದನ ನಡೆಸುತ್ತಿರುವರೆಂದು ಈಜಿಪ್ಟು ಪತ್ರಿಕೆಗಳು ಪ್ರಕಟಿಸಿವೆ.

ವಾಷಿಂಗ್ಟನ್ 7— ಅಮೇರಿಕಾವು ಪಾಕಿಸ್ತಾನಕ್ಕೆ ಮಾಡಿರುವ 600 ಮಿಲಿಯ ಡಾಲರುಗಳಿಗೆ ಮೇಲ್ಪಟ್ಟ ಸಹಾಯವು ಒಳ್ಳೆ ಬೆಲೆಬಾಳುವುದಾಗಿದ್ದರೂ ಅತಿ ಕಡಮೆ ಲಾಭದಾಯಕವಾಗಿದೆ ಎಂದು ಜನರಲ್ ಅಕೌಂಟಿಂಗ್ ಆಫೀಸು ಕಾಂಗ್ರೆಸ್ಸಿಗೆ ಕೊಟ್ಟಿರುವ ವರದಿಯಲ್ಲಿ ತಿಳಿಸಿದೆ.

ನವದೆಹಲಿ 7— ಭಾರತದಲ್ಲಿ ಕ್ರಿಶ್ಚಿಯನ್ ಮಿಷನರಿಗಳ ರಾಷ್ಟ್ರವಿರುದ್ಧ ವರ್ತನೆಗಳನ್ನು ಮಟ್ಟಹಾಕಲು ಇಂಟರ್ ನ್ಯಾಷನಲ್ ಆರ್ಡರ್ ಲೀಗ್ ಎಂಬ ಸಂಸ್ಥೆಯು ಸ್ಥಾಪಿಸಲಾಗಿದೆ.

ಇಂಫಾಲ್ 3— 6 ಬ್ರಿಟಿಷ್ ತುಪಾಕಿಗಳು, 4 ಜಪಾನೀ ತುಪಾಕಿಗಳು ಮತ್ತು 43 ಹೆಂಡು ಮದ್ದುಗುಂಡೊಡನೆ 77 ಮಂದಿ ನಾಗಾಗಳು ಶರಣಾಗತರಾದರು.

ದಲಾೈ ಲಾಮಾರಿಗೆ ಪ್ರಧಾನಿ ನೆಹರೂರ ಸುಸ್ವಾಗತ

ದಲ್ಲೈ ಲಾಮಾರವರು

ಪಿಲಾಂಗ್ 7— ಟಾವಾಂಗಿಗೆ ಆಗಮಿಸಿದ ದಲ್ಲೈಲಾಮರಿಗೆ ಅಭಿವಂದನಾ ಸಂದೇಶ ಕಳಿಸಿ ಸುಸ್ವಾಗತಿಸಿರುವರು — ದಲ್ಲೈಲಾಮಾರವರು ಇಲ್ಲಿಂದ ಬೊಂಡ್ಡಿಲ್ಲಾಕ್ಕೆ ದಯಮಾಡಿಸುವರು ಈ ಪ್ರಯಾಣ ಸುಮಾರು 5 ದಿವಸಗಳು ಹಿಡಿಯುವುದು : 10 ಸಾವಿರ ಅಡಿಯಿಂದ 15 ಸಾವಿರ ಅಡಿಗಳ ಅನೇಕ ಕಣಿವೆಗಳನ್ನು ಹಾಯಬೇಕು : ಪ್ರಯಾಣವನ್ನು ಟಾಕಣಾಗಳ ಅಥವಾ ಹೇಸಂಕತ್ತೆಗಳ ಅಥವಾ ಕಾಲ್ನಡಿಗೆಯಲ್ಲಿ ಮಾಡಬೇಕಾಗಿದೆ— ಅಸ್ಸಾಂ ಶುಪಾಕಿ ಪಡೆಯು ದಲ್ಲೈಲಾಮಾಂರಕ್ಷಣೆಗಾಗಿರುವುದು.

ಡಲೆಸ್ ರಾಜೀನಾಮೆ ಇಲ್ಲ

ವಾಷಿಂಗ್ಟನ್ 7— ಡಲೇಸರು ರಾಜೀನಾಮೆ ಕೊಡುತ್ತಾರೆಂದು ಪ್ರಕಟವಾಗಿದ್ದ ಸುದ್ದಿಯಲ್ಲಿ ಸತ್ಯಾಂಶವಿಲ್ಲವೆಂದು ಸ್ಟೇಟ್ ಇಲಾಖಾ ವಾರ್ತಾಧಿಕಾರಿಗಳು ಹೇಳಿದ್ದಾರೆ.

ನವದೆಹಲಿ 7— ಒರಿಸ್ಸಾ ಶಾಸನ ಸಭೆಯಲ್ಲಿ ಪ್ರಮುಖ ವಿರೋಧಪಕ್ಷವಾದ ಗಣತಂತ್ರ ಪರಿಷತ್ತು ಕಟ್ಟಕಡೆಗೆ ಕಾಂಗ್ರೆಸ್ಸಿನಲ್ಲೇ ಸೇರಿಹೋಗುವುದೆಂಬ ಭಾವನೆ ತಮಗಿರುವುದಾಗಿ ಒರಿಸ್ಸಾ ಮುಖ್ಯ ಮಂತ್ರಿ ಡಾ|| ಹರೇಕೃಷ್ಣ ಮೆಹತಾಬ್ ಹೇಳಿರುವರು.

ವಿಶ್ವಸಂಸ್ಥೆ 7— ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಹುಟ್ಟಿನ ಜನರಿಗೆ ತೋರಿಸುತ್ತಿರುವ ನಡವಳಿಕೆ ಬಗ್ಗೆ ಸಂಧಾನ ನಡೆಯುಬೇಕೆಂದು ಭಾರತವು ಔಪಚಾರಿಕವಾಗಿ ಸೂಚಿಸಿತು.

ಇಂದಿರಾರಿಗೆ ಆಹ್ವಾನ

ಲಂಡನ್ 7— ಈ ಬೇಸಿಗೆಯಲ್ಲಿ ಭಾರತ ಕಾಂಗ್ರೆಸ್ ಅಧ್ಯಕ್ಷಣಿ ಇಂದಿರಾ ಗಾಂಧಿಯವರು ಬ್ರಿಟನ್ನಿಗೆ ಭೇಟಿ ಕೊಡುವಂತೆ ಆಹ್ವಾನಿಸಲು ಬ್ರಿಟಿಷ್ ಕನ್ಸರ್ವೆಟಿವ್ ಪಾರ್ಟಿಯ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ನೂತನ ವಿದ್ಯಾ ಮಂತ್ರಿ

ನವದೆಹಲಿ 7— ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನ ಅಧ್ಯಕ್ಷರಾದ ಸಿ. ಡಿ. ದೇಶಮುಖರು ಭಾರತ ಸರಕಾರದ ವಿದ್ಯಾ ಮಂತ್ರಿಗಳಾಗುವರೆಂದು ಹೇಳಲಾಗಿದೆ.

ಮೈಸೂರು ಗೌರ್ನರರ ಔದಾರ್ಯ

ಮೈಸೂರು 5— ಮೈಸೂರು ಗೌರ್ನರರು ಸ್ಕೌಟ್ಸ್ ಕ್ಲಬ್ಬಿಗೆ ಈಗ ಅದಿರುವ ರಾಜಮನೆತನದ ಭವ್ಯ ಕಟ್ಟಡ ಮತ್ತು ಸುತ್ತಮುತ್ತ ಪ್ರದೇಶವನ್ನು ಉದಾರದಾನ ಮಾಡಿದ್ದಾರೆ.

ಚಂಡೀಘರ 7— ಸಫೋರ್ಡಯುದ ಮೂಲಕ ಬಡಕನವು ನಿರ್ಮೂಲವಾದರೆ, ಭಾರತದಲ್ಲಿ ಕಮ್ಯೂನಿಸಂಗೆ ಅವಕಾಶವಿಲ್ಲವೆಂದು, ಏನೋಬಾ ಹಾಲೂ ಬಜಾರಿನಲ್ಲಿ ಹೇಳಿದರು.

ಕರಾಚಿ 7— ಅಕ್ರಮಸಾಗಾಣಿಕೆಯ ರಾಜನೆಂದು ಖ್ಯಾತಿಗೊಂಡ ಹಾಜಿ ವಾಲಿ ಮಹಮದ್ ಭಟ್ಟಿಗೆ ವಿಶೇಷ ಕೋರ್ಟು 5 ವರ್ಷ ಸಜೆ ಮತ್ತು 2 ಲಕ್ಷ ರೂಗಳ ಜುಲ್ಮಾನೆ ವಿಧಿಸಿತು — ಇವನಲ್ಲಿ ದೊರೆತ 1 ಕೋಟಿ ರೂಗಳ ಭಾರಗಾರವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಅಜ್ಞೆ ವಿಧಿತು.

ಶ್ರೀ ವಿಕಾರಿ ಸಂವತ್ಸರ

ಗುರು ರಾಜನಾಗಿರುವುದರಿಂದ ದ್ವಿಜರು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು) ತಮ್ಮ ಧರ್ಮಾನುಗುಣವಾದ ಕರ್ಮಾನುಷ್ಠಾನದಲ್ಲಿ ನಿರತರೂ, ಒಳ್ಳೆಯ ನಡತೆಯುಳ್ಳವರೂ ಆಗಿದುತ್ತಾರೆ ; ರಾಜರು ನೀತಿವಂತರಾಗಿರುತ್ತಾರೆ : ಒಳ್ಳೆಯ ಮಳೆಯಾಗಿ ದೇಶದಲ್ಲಿ ಸುಭಿಕ್ಷವೂ ಪ್ರಜೆಗಳಿಗೆ ಸೌಖ್ಯವೂ ಉಂಟಾಗುತ್ತದೆ.

ಅಂಗಾರಕನು ಪುಂತ್ರಿಯಾಗಿರುವುದರಿಂದ ಬೆಂಕಿ, ಹೊಡೆದಾಟ, ಕಳ್ಳರು, ಗಾಳಿ, ರೋಗಗಳಿಂದ ಭಯ ಹೆಚ್ಚು : ಸಸ್ಯಗಳೂ ಒಣಗುತ್ತವೆ.

ಚಂದ್ರನು ಸೇನಾಧಿಪತಿಯಾಗಿರುವುದರಿಂದ ಮೋಡಗಳು ಭೂಮಿಯ ಮೇಲೆ ಹೆಚ್ಚು ಮಳೆ ಸುರಿಸುತ್ತವೆ : ಜನರು ರೋಗಬಾಧೆ ಇಲ್ಲದೆ ಸೌಖ್ಯದಿಂದಿರುತ್ತಾರೆ : ಹಸುಗಳು ಹೆಚ್ಚು ಹಾಲನ್ನು ಕರೆಯುತ್ತವೆ.

ಶುಕ್ರನು ರಸಾಧಿಪತಿಯಾಗಿರುವುದರಿಂದ ಬಿಳಿಯ ಮಣ್ಣಿನಲ್ಲಿ ಒಳ್ಳೆಯ ಬೆಳೆಯೂ, ಜಲಧಾನ್ಯ ಮತ್ತು ಸ್ಥಳಧಾನ್ಯಗಳ (ತರೀ ಮತ್ತು ಖುಷ್ಕಿ) ಫಸಲು ಹುಲುಸಾಗಿಯೂ ಆಗುತ್ತದೆ

ಬುಧನು ಧಾನ್ಯಾಧಿಪತಿಯಾಗಿರುವ ಕಾರಣ ಸಾಮಾನ್ಯ ಬೆಳೆಯೂ ಸಸ್ಯಗಳಿಗೆ ಹೆಚ್ಚು ಬೆಳವಣಿಗೆ ಇಲ್ಲದಿರುವಿಕೆಯೂ ಮೋಡಗಳಿಗೆ ಗಾಳಿಯ ಬಾಧೆಯೂ ಎಲ್ಲ ಜನರಿಗೂ ಭಯವೂ ಉಂಟಾಗುತ್ತದೆ.

ಚಂದ್ರನು ಅಘ್ರ್ಯಾಧಿಪತಿ ಮತ್ತು ಮೇಘಾಧಿಪತಿಯಾಗಿರುವ ಕಾರಣ ಎಲ್ಲ ದೇಶಗಳಲ್ಲಿ ಒಳ್ಳೆಯ ಮಳೆಯಾಗಿ ಸಸ್ಯವೃದ್ಧಿಯೂ, ಧಾನ್ಯಗಳ ಫಸಲು ಅನುಕೂಲವಾಗಿಯೂ ಆಗುತ್ತದೆ : ಪದಾರ್ಥಗಳ ವ್ಯಾಪಾರವು ಹೆಚ್ಚಾಗಿ ಬೆಲೆಯು ಕಡಮೆಯಾಗುತ್ತದೆ ; ಹಸುಗಳು ಹೆಚ್ಚಾಹಾಲನ್ನು ಕೊಡುತ್ತವೆ

ಸೂರ್ಯನು ರಸಾಧಿಪತಿಯಾಗಿರುವುದರಿಂದ ಶ್ರೀಗಂಧ, ಕುಂಕುಮ ಕೇಸರಿ ಗುಗ್ಗುಳ, ಎಳ್ಳೆಣ್ಣೆ ಹರಳೆಣ್ಣೆ ಮೊದಲಾದ ರಸವಸ್ತುಗಳು ಹೆಚ್ಚಾಗಿ ದೊರೆಯುತ್ತವೆ ಮತ್ತು ಅವುಗಳ ಬೆಲೆ ಕಡಮೆಯಾಗುತ್ತದೆ.

ಗುರುವು ನೀರಸಾಧಿಪತಿಯಾಗಿರುವುದರಿಂದ ಪುಷ್ಪರಾಗ ಮೊದಲಾದ ರತ್ನಗಳು ಅನೇಕ ವಿಧ ವಜ್ರಗಳು ಹೆಚ್ಚಾಗಿ ಸಿಕ್ಕುತ್ತವೆ

ಶ್ರೀ ಕೃಷ್ಣನು ಪಶುನಾಯಕನಾಗಿರುವುದರಿಂದ ಪಶುವೃದ್ಧಿಯೂ, ಸುಭಿಕ್ಷವೂ ಸಸ್ಯಸಂಪತ್ತೂ, ಹುಲ್ಲು ಸಮೃದ್ಧಿಯೂ ಉಂಟಾಗುತ್ತದೆ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

9-ಗುರುವಾರ ಪಾಡ್ಯ (ಬೆ 9-11) ಅಶ್ವಿನಿ

ಸೂಚನೆ — ಚಾಂದ್ರಮಾನ ಯುಗಾದಿ ಪ್ರಯುಕ್ತ ನಾಳೆ ಪತ್ರಿಕೆಗೆ ರಜ

Shree Cycle Mart

Jagonmohan Palace Road
MYSORE

Good cycles for hire
Repairs undertaken
Overhauling a speciality
Moderate charges
Excellent workmanship
Prompt attention

— ಪಕ್ಕದ ಚಿತ್ರ —

1 ಮನುಷ್ಯನು ಇನ್ನೂ ಅಭಿವೃದ್ಧಿಯ ಅರುಣೋದಯದಲ್ಲಿದ್ದಾನೆ ; ಅವನ ಅತ್ಯುತ್ಕೃಷ್ಟ ಸ್ಟೀಂ ಇಂಜಿನ್ ಶೇಕಡ 8ಕ್ಕೆ ವಿರುದ್ಧ ಆತನ ಅತ್ಯಾಧುನಿಕ ಡಿಯುಸಿಲ್ ಮತ್ತು ಗ್ಯಾಸೊಲಿನ್ ಇಂಜಿನ್‌ಗಳು ಶೇಕಡಾ 25 ಮಾತ್ರ ಸಮರ್ಥವಾಗಿವೆ

2 ಉತ್ತರ ಧ್ರುವದ ಮಂಜಿನಗಡ್ಡೆ ಕೆಳಗಿ ಪಶ್ಚಿಮದಿಂದ ಪೂರ್ವಕ್ಕೆ ಅಮೆರಿಕಾದ ಅಣು ಶಕ್ತಿಯ ನೌಟಿಲಸ್ ಪ್ರಯಾಣಮಾಡಿದ 5 ದಿನಗಳಲ್ಲಿ, ಮತ್ತೊಂದು ಅಣುಶಕ್ತಿಯ ಸ್ಕೇಟ್ ಎಂಬ ಸಬ್‌ಮೆರೀನು ಅದೇ ನೀರಿನ ಪೂರ್ವದಿಂದ ಪಶ್ಚಿಮ ಮಾರ್ಗದಲ್ಲಿ ಹೋಯಿತು.

3 ಚಪ್ಪರದಾಕ್ಕಿಯು ಎಷ್ಟು ಕಾಲದಿಂದಿದೆ ಎಂಬುದು ನಿಷ್ಕರ್ಷಿತವಾಗಿಗೊತ್ತಾಗಿಲ್ಲ ; ಈಜಿಪ್ಟಿನವರು ೬೦೦೦ ವರ್ಷಗಳ ಹಿಂದಿನಿಂದ ಚಪ್ಪರದಾಕ್ಕಿಯನ್ನು ಬೆಳೆದು ದಾಕ್ಷಾರಸವನ್ನು ತಯಾರಿಸುತ್ತಿದ್ದರು; ಬಹಳ ಪುರಾತನ ಹೆಬ್ರಿಗ್ರೀಕ್ಕು ರೋಮ್ ಬರವಣಿಗೆಗಳಲ್ಲಿ ಚಪ್ಪರದಾಕ್ಕಿ ಕೃಷಿ ವಿಷಯ ಬರೆದಿದೆ.

Edited, Printed & Published by Charana Prachara Nirata M S Krishna Rao, at the Satyavadi Press Chamarajapuram, Mysore

ಅಪೆರಾ — 3-4-59 ರಿಂದ

ನೆಕಲರೂ ನೋಡಬೇಕಾದ ಮನೋಜ್ಞವಾದ ಪೌರಾಣಿಕ ಚಿತ್ರ

ಸತೀ ತುಳಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣಕುಮಾರಿ, ತಿಮ್ಮರನಾಥ್, ಗುಮ್ಮಡಿ

ಪ್ರತಿದಿನ 3 ಆಟಗಳು

ವುಡ್‌ಲಾಂಡ್ ತಾ. 3-4-59 ನೇ
ಶಿ ನ ಮ ಶುಕ್ರವಾರದಿಂದ

ಯುಎ. ಬಿ. ಫಿಲ್ಮ್ಸ್‌ರವರ

ಅನಾದಿ
(ಹಿಂದಿ)

ತಾರಾಗಣ— ನೂತನ, ರಾಜ್ ಕಪೂರ್
ಮೋತೀಲಾಲ್, ಶುಭಾ ಖೋಟೆ

ದಿಗ್ದರ್ಶನ : ಋಷಿಕೇಷ್ ಮುಖರ್ಜಿ
ಸಂಗೀತ : ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ
ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]